

ರ್ಯಾಪರ್ ಸಿದ್ಧಾರ್ಥ್ ಎನ್. ಬೆಂಗಳೂರಿನ ಯಲಹಂಕದವರು. ಬಿ.ಎಸ್‌ಸಿ (ಬಯೋಟೆಕ್) ಪದವೀಧರ. 100ಕ್ಕೂ ಹೆಚ್ಚು ಕಾಲೇಜುಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಸಂಪರ್ಕ: Insta: @sid18music, YouTube: SID18MUSIC, ಮೊ: 97399 72219

ಕಾಲೇಜು ಸ್ಪರ್ಧೆಯಲ್ಲಿ ಅನೇಕ ಬಹುಮಾನಗಳನ್ನು ಪಡೆದಿದ್ದೇನೆ. ಅನೇಕ ಕಾಲೇಜುಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದೇನೆ. ಗುರುಗಳು ಇಲ್ಲದೆ ಕಲಿತ ವಿದ್ಯೆ ಇದು. ಸಂಗೀತ ಕಲಿಸಲು ಗುರುಗಳು ಇರ್ತಾರೆ. ರ್ಯಾಪ್‌ಗೆ ಹಾಗಿಲ್ಲ. ಆರಂಭದಲ್ಲಿ ಕೆಲವೊಂದು ಇಂಗ್ಲಿಷ್ ಹಾಡು ಕೇಳಿದೆ. ನಂತರ ಅದು ಅನುಕರಣೆ ಆದೀತು ಎಂದು ಕೇಳುವುದನ್ನು ನಿಲ್ಲಿಸಿಬಿಟ್ಟೆ. ಈ ಪ್ರಕಾರದಲ್ಲಿ ಪದ ಕಟ್ಟುವ ಬಗೆಯೇ ಭಿನ್ನ. ಸಿನಿಮಾದ ಒಂದು ಹಾಡನ್ನು ಹೇಳಲು ಎರಡು ಮೂರು ನಿಮಿಷ ಬೇಕು. ರ್ಯಾಪ್‌ನಲ್ಲಿ ಎಂಟು ಸಾಲಿನ ಒಂದು ಹಾಡಿಗೆ ಅರ್ಧ ನಿಮಿಷ ಸಾಕು. ಇದನ್ನು ನಾವು ಬರೆದು ನಾವೇ ಹಾಡುತ್ತೇವೆ. ಸಿನಿಮಾ ಹಾಡಿಗೆ ಲೇಖಕರೇ ಬೇರೆ, ರಾಗ ಸಂಯೋಜಕರು ಬೇರೆ, ಹಾಡುವವರೂ ಬೇರೆ ಇರುತ್ತಾರೆ.

◆ **ಕನ್ನಡದಲ್ಲಿ ರ್ಯಾಪ್ ಬೆಳವಣಿಗೆ ಹೇಗಿದೆ?**

ರ್ಯಾಪ್ ಆಧರಿಸಿ ಹಿಂದಿಯಲ್ಲಿ 'ಗಲ್ಲಿಬಾಯ್' ಸಿನಿಮಾ ಮಾಡಿದರು. ಅದಾದ ಮೇಲೆ ತುಂಬ ಜನ ಈ ಮಾದರಿಯ ಬರಹಕ್ಕೆ ಮೋಹಿತರಾಗಿದ್ದಾರೆ. ಕನ್ನಡದಲ್ಲಿ ಗಂಭೀರವಾಗಿ ಇದನ್ನು ಮಾಡುವವರು ಕೆಲವೇ ಮಂದಿ ಅನ್ನಬಹುದು. ರ್ಯಾಪ್ ಜನಪ್ರಿಯತೆಗೆ ಇನ್ನೂ ಕೆಲವು ವರ್ಷ ಬೇಕಾಗಬಹುದು. ಯುವಕರು

# ರ್ಯಾಪರ್ ಸಿದ್ಧಾರ್ಥ್ ಸಂದರ್ಶನ

ಇದನ್ನು ಹೆಚ್ಚು ಇಷ್ಟಪಡುತ್ತಾರೆ. ದೆಹಲಿ, ಮುಂಬೈಯಲ್ಲಿ ಬೂಮ್ ಆಗಿದೆ. ಕನ್ನಡದಲ್ಲಿ ಹೆಚ್ಚು ಜನರಿಗೆ ಇನ್ನೂ ಗೊತ್ತಿಲ್ಲ. ಬೆಂಗಳೂರಿನ ಕೆಲವು ಕಾಲೇಜುಗಳಲ್ಲಿ ಮನೋರಂಜನೆಗಾಗಿ ಈ ಕಾರ್ಯಕ್ರಮ ಆಯೋಜಿಸುತ್ತಿದ್ದಾರೆ. ಇದರಲ್ಲಿ ರೂಪಕಗಳನ್ನು ಬಳಸಿದರೆ ಅರ್ಥ ಆಗುವುದಿಲ್ಲ. ವಾಕಿಂಗ್ ಹೋದಾಗ, ಜಿಮ್ ಮಾಡುವಾಗ ಈ ಹಾಡುಗಳನ್ನು ಕೇಳಲು ಇಷ್ಟಪಡುತ್ತಾರೆ.

◆ **ವಾಣಿಜ್ಯದ ಆಯಾಮ ರ್ಯಾಪ್‌ಗೆ ಇದೆಯೇ?**

ವಾಣಿಜ್ಯದ ಉದ್ದೇಶಕ್ಕೆ ಮಾಡಬಹುದು. ನಾನು ಸಾಮಾಜಿಕ ಮಾಧ್ಯಮದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದೇನೆ. 'ಬೆಂಗಳೂರು' ಎಂಬ ಒಂದು ಹಾಡಿಗೆ 70 ಸಾವಿರ ವೀವ್ಸ್ ಸಿಕ್ಕಿದ್ದವು. ಯಾವುದೇ ಪ್ರಮೋಷನ್ ಇಲ್ಲದೆ ಅಷ್ಟು ಸಿಕ್ಕಿದ್ದವು.

ಈ ವಿಡಿಯೊ ವೀಕ್ಷಣೆಗೆ youtu.be/0NrtBbg6EMs ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

'ಸ್ಟುಡಿಯೊ ಗ್ಯಾಂಗ್ ಸ್ಟಾರ್' ಹಾಡಿನಲ್ಲಿ ರ್ಯಾಪ್ ಅಂದರೆ ಏನು ಅನ್ನುವುದನ್ನು ಹೇಳುವ ಸಂಬಂಧ ಮಾಡಿದೆ. ಅದಕ್ಕೆ ನಾಲ್ಕೈದು ಸಾವಿರ ವೀವ್ಸ್ ಸಿಕ್ಕವು. ಜನ ಇಷ್ಟಪಡುವುದಿಲ್ಲ ಎಂದು ಗೊತ್ತಿದ್ದೇ ಇದನ್ನು ರಚಿಸಿದ್ದೆ. ಏಕೆಂದರೆ ನಾನು ಅದನ್ನು ಹೇಳಲೇಬೇಕು ಎಂದು ಹೇಳಿದೆ. ಕಲಾವಿದನಾಗಿ ಹೇಳಬೇಕು ಎಂದಿದ್ದನ್ನು ಹೇಳಿಯೇ ಬಿಡಬೇಕು. ಇಲ್ಲದಿದ್ದರೆ ಕಲಾವಿದ ನಾನಲ್ಲ ಎಂದಾಗುತ್ತದೆ.

◆ **ಇದುವರೆಗೆ ಎಷ್ಟು ಹಾಡನ್ನು ರಚಿಸಿದ್ದೀರಿ? ಯಾವ ರೀತಿಯ ತಯಾರಿ ಮಾಡುತ್ತೀರಿ?**

ಸುಮಾರು 30ರಿಂದ 40 ಹಾಡು ಬರೆದಿದ್ದೇನೆ. ನಾಲ್ಕು ಆಡಿಯೊ ರಿಲೀಸ್ ಆಗಿವೆ. 3 ವಿಡಿಯೊ ಮಾಡಿಸಿದ್ದೇನೆ. ಸದ್ಯ ನಾಲ್ಕು ವಿಡಿಯೊ ರಿಲೀಸ್ ಆಗುತ್ತವೆ. ಆಡಿಯೊ ದೊಡ್ಡ ಪ್ರಮಾಣದಲ್ಲಿ ರೀಚ್ ಆಗಲ್ಲ. ಹಾಗಾಗಿ ವಿಡಿಯೊ ಮಾಡಬೇಕು. ನನ್ನ ಈ ಬರಹವನ್ನು ಧ್ವನಿಮುದ್ರಿಕೆ ಮಾಡಲು ಒಂದೆರಡು ಕಂಪನಿಗಳು ನನ್ನ ಹಾಡನ್ನು ಕೇಳಿದ್ದವು. ನಮ್ಮದೇ ಚಾನಲ್‌ನಲ್ಲಿ ಬಿಡುಗಡೆ ಮಾಡಿದರೆ ಒಳ್ಳೆಯ ಬೆಳವಣಿಗೆ ಸಿಗಬಹುದು ಎಂದು ಅದನ್ನು ನಿರಾಕರಿಸಿದ್ದೇನೆ. ಯೂಟ್ಯೂಬ್‌ನಲ್ಲಿ ದೊಡ್ಡ ಆದಾಯವೇನೂ ಇಲ್ಲ. ಆದರೆ ಅದು ನನಗೊಂದು ಐಡೆಂಟಿಟಿ ಕೊಡುತ್ತದೆ. 10 ಲಕ್ಷ ವೀಕ್ಷಣೆ ಸಿಕ್ಕರೆ 60 ಸಾವಿರ ಹಣ ಸಿಗುತ್ತದೆ. ಒಳ್ಳೆಯ ವಿಡಿಯೊ ಮಾಡಲು ಅದಕ್ಕಿಂತ ಹೆಚ್ಚಿನ ಹಣ ಖರ್ಚಾಗಿರುತ್ತದೆ. ಜಾಹೀರಾತು ಆಧಾರಿತ ಹಾಡುಗಳನ್ನು ರಚಿಸುವುದರಿಂದ ಒಳ್ಳೆಯ ಆದಾಯ ಸಿಗುತ್ತದೆ.

'ಬೆಂಗಳೂರು' ಹಾಡನ್ನು ಒಂದೇ ಗಂಟೆಯಲ್ಲಿ ಬರೆದಿದ್ದೆ. ಕೆಲವೊಮ್ಮೆ ತಿಂಗಳು ಕಳೆದರೂ ಏನೂ ಬರೆಯಲು ಆಗುವುದಿಲ್ಲ. ನಾನು ಕುಳಿತು ಬರೆಯುವುದಿಲ್ಲ. ಮನಸಿನಲ್ಲಿ ಬಂದಿದ್ದನ್ನು ಮೊಬೈಲ್‌ನಲ್ಲಿ ಟೈಪ್ ಮಾಡಿ ಇಟ್ಟುಕೊಳ್ಳುತ್ತೇನೆ. ಆಗಲೇ ಅದಕ್ಕೊಂದು ಲಿರಿಕ್ಸ್ ಟ್ರ್ಯಾಕ್ ಸಿಕ್ಕಿರುತ್ತದೆ. ಒಂದು ದಿನ ಅದಕ್ಕೆ ಅಂತಿಮ ರೂಪ ನೀಡುತ್ತೇನೆ. ಒಗಟಿನಂತೆ ಬರೆಯುವುದು ಇಷ್ಟ ಆಗಲ್ಲ. ಎಂಟು ವರ್ಷದ ಚಿಕ್ಕ ಹುಡುಗನಿಗೂ ಅರ್ಥವಾಗುವಂತೆ ಬರೆಯಬೇಕು ಎನ್ನುವುದು ನನ್ನಾಸೆ. ಇಂಗ್ಲಿಷ್ ವೆಬ್ ಸೀರೀಸ್ ನೋಡುತ್ತೇನೆ. ಒಂದೊಂದು ಎಪಿಸೋಡ್ ಕೂಡ ಸಿನಿಮಾ ರೀತಿ ಇರುತ್ತವೆ. ಅದು ತುಂಬ ಪ್ರೇರಣೆ ನೀಡುತ್ತದೆ. ನಾನು ಬರಹಗಾರ ಆಗಲೇಬೇಕು ಎಂದು ಯೋಚಿಸಿಲ್ಲ. ಹೊಸ ಚಿಂತನೆಗಳಿಗೆ ಸಿನಿಮಾ ಕೂಡ ನೋಡುತ್ತೇನೆ.

ರ್ಯಾಪ್ ಲಿಂಕ್: https:/https://youtu.be/zsDvCmiDCak

ಪ್ರತಿಕ್ರಿಯಿಸಿ: feedback@sudha.co.in